(13)

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\948\2017\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:07/08/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಎ.ಕೆ.ರಾಜಣ್ಣ ಬಿನ್ ಚೌಡಣ್ಣ, ಅಲಗೇರಿ ಗ್ರಾಮ, ಕಸಬಾ ಹೋಬಳಿ, ದೂರ್ವಾಸಪುರಂ ಅಂಚೆ, ತೀರ್ಥಹಳ್ಳಿ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ ದೂರ್ವಾಸಪುರಂ ಅಂಚೆ ಕಸಬಾ ಹೋಬಳಿ ಅಲಗೇರಿ ಗ್ರಾಮ ನಿವಾಸಿಯಾದ ಶ್ರೀ.ಎ.ಕೆ.ರಾಜಣ್ಣ ಬಿನ್ ಚೌಡಣ್ಣ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ ಕಛೇರಿ ತಹಶೀಲ್ದಾರ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ ಆಲಗೇರಿ ಗ್ರಾಮದ ಸರ್ವೆ ನಂ.37ರಲ್ಲಿರುವ ಸರ್ಕಾರಿ ಗೋಮಾಳ ಜಾಗದಲ್ಲಿ ಸುಮಾರು 10 ಎಕರೆ ಜಮೀನಿದ್ದು, ಅದರಲ್ಲಿ ಸ್ಮಶಾಣಕ್ಕೆ ಮಂಜೂರಾದ 1 ಎಕರೆ ಸಹಿತ ಶ್ರೀ.ರತ್ನಮ್ಮ ಕೋಂ ಮಂಜಪ್ಪಗೌಡ ಮತ್ತು ಮಕ್ಕಳಾದ ಶ್ರೀ.ಮಂಜಪ್ಪಗೌಡ, ಶ್ರೀ.ಪುರುಷೋತ್ತಮ, ಶ್ರೀ.ಶಾಂತಗಿರೀಶ್, ಶ್ರೀ.ಸುರೇಶ್ ರವರುಗಳು ಅತಿಕ್ರಮಣ ಮಾಡಿದ್ದು, ಇದರಿಂದ ಗ್ರಾಮಸ್ಥರಿಗೆ ಮತ್ತು ರೈತರಿಗೆ ತೊಂದರೆಯಾಗಿ ಮೃತಪಟ್ಟ ವ್ಯಕ್ತಿಗಳನ್ನು ಸಂಸ್ಕಾರ ಮಾಡಲು ಸ್ಥಳಾವಕಾಶ ಇಲ್ಲ. ಸದರಿ ಒತ್ತುವರಿಯನ್ನು ತೆರವುಗೊಳಿಸಲು ಎದುರುದಾರರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಜಮೀನು ಜಿಲ್ಲಾಧಿಕಾರಿಗಳ ಆದೇಶದಂತೆ ಸ್ಮಶಾಣಕ್ಕಾಗಿ ಮಂಜೂರಾಗಿದೆ. ಈ ಬಗ್ಗೆ ಶ್ರೀ.ಮಂಜಪ್ಪ ಗೌಡ ಎಂಬುವವರು ತಕರಾರು ಸಲ್ಲಿಸಿದ್ದು, ಶ್ರೀಮತಿ.ಶಾಂತಾ ಗಿರೀಶ್ ರವರು ತಮ್ಮ ಪತಿಯವರ ಹೆಸರಿಗೆ ಮಂಜೂರು ಮಾಡಲು ಕೋರಿದ್ದಾರೆ. ಈ ಬಗ್ಗೆ ಸಾಕಷ್ಟು ತಕರಾರುಗಳು ಉಂಟಾದ ಕಾರಣ ಜಿಲ್ಲಾಧಿಕಾರಿಗಳು ದಿ:11/11/2016ರಂದು ಈ ಹಿಂದೆ ಮಾಡಲಾದ ಸ್ಮಶಾಣದ ಮಂಜೂರಾತಿ ರದ್ದು ಮಾಡಲು ಮತ್ತು ಪರ್ಯಾಯ ಜಾಗವನ್ನು ಕಾಯ್ದಿರಿಸಿಕೊಳ್ಳಲು ಆದೇಶಿಸಿದ್ದು, ಈ ಬಗ್ಗೆ ಕಂದಾಯ ಅಧಿಕಾರಿಗಳಿಂದ, ಗ್ರಾಮ ಪಂಚಾಯತ್‌ರವರಿಂದ ಪ್ರಗತಿಯಲ್ಲಿದೆ. ಶ್ರೀ.ಗಿರೀಶ್ ಬಿನ್ ರಾಮಯ್ಯ ಗೌಡ ರವರು ಸರ್ವೆ ನಂ.37ರಲ್ಲಿ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗಳು ಪರಿಶೀಲನಾ ಹಂತದಲ್ಲಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲೂ ಸಹ ವಿಚಾರಣೆಗಳು ಬಾಕಿ ಇವೆ. ಸದರಿ ನ್ಯಾಯಾಲಯದಿಂದ ಆದೇಶ ಬಂದ ನಂತರ ಪರಿಶೀಲಿಸ ಬೇಕಾಗುತ್ತದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯನ್ನು ಅಲ್ಲಗಳೆದಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಆಲಗೇರಿ ಗ್ರಾಮದ ಸರ್ವೆ ನಂ.37ರ ಸರ್ಕಾರಿ ಗೋಮಾಳ ಜಾಗದಲ್ಲಿ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 14 ಭೂಸ್ವಾವ್ಯ (3) 2002 ದಿ:28/05/02ರಂತೆ ಗ್ರಾಮಕ್ಕೊಂದು ಸಾರ್ವಜನಿಕ ಸ್ಮಶಾಣದ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿ, ಜಿಲ್ಲಾಧಿಕಾರಿಗಳ ಆದೇಶ ಸಂ:51431 ಎಲ್‌ಎನ್‌ಡಿ\1 ಎಸ್‌ಆರ್ 52015–16 (5817/15–16) ದಿನಾಂಕ:01/12/15ರಂತೆ ಷರತ್ತಿಗೊಳಪಟ್ಟು ಸ್ಮಶಾಣ ಮಂಜೂರು ಮಾಡಲಾಗಿದೆ. ಆ ನಂತರ, ಈ ಬಗ್ಗೆ ತಕರಾರುಗಳು ಬಂದ ಕಾರಣ ಮತ್ತು ಕಂದಾಯ ಸಚಿವರ ಆದೇಶದಂತೆ ಜಿಲ್ಲಾಧಿಕಾರಿಗಳು ಎಲ್‌ಎನ್‌ಡಿ.ಸಿಆರ್.341/16–17 (6347/16–17)ರಂತೆ ದಿ:11/11/16ರ ಪತ್ರದಂತೆ ಈ ಹಿಂದೆ ಮಾಡಲಾದ ಸ್ಮಶಾಣದ ಮಂಜೂರಾತಿ ರದ್ದುಪಡಿಸಿದ್ದು, ಪರ್ಯಾಯ ಜಾಗವನ್ನು ಕಾಯ್ದಿರಿಸಲು ಆದೇಶಿಸಿರುವುದು ಕಂಡು ಬಂದಿದೆ. ಅದರಂತೆ, ಸದರಿ ಜಮೀನಿನಲ್ಲಿ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಪ್ರಕರಣ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿ ಇರುವುದು ಕಂಡು ಬಂದಿದೆ. ಸಾರ್ವಜನಿಕರ ವಿರೋಧ ಮತ್ತು ಕಂದಾಯ ಸಚಿವರ ಆದೇಶದಂತೆ ಸದರಿ ಸ್ಮಶಾಣದ ಜಮೀನನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳು ರದ್ದುಪಡಿಸಿದ್ದು, ಈ ಬಗ್ಗೆ ಹಲವಾರು

ಪ್ರಕರಣಗಳು ಸಹ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವುದು ಕಂಡು ಬಂದಿದೆ. ಜಿಲ್ಲಾಧಿಕಾರಿಗಳ ಆದೇಶದಂತೆ ಸದರಿ ಸ್ಮಶಾಣಕ್ಕೆ ಕಾಯ್ದಿರಿಸಿದ ಜಮೀನನ್ನು ಎದುರುದಾರರು ರದ್ದುಪಡಿಸಿದ್ದು, ಈಗಾಗಲೇ ಪರ್ಯಾಯ ಜಮೀನಿನಲ್ಲಿ ಸ್ಮಶಾಣಕ್ಕೆ ಜಾಗ ಕಾಯ್ದಿರಿಸಲು ಪ್ರಗತಿಯಲ್ಲಿರುವುದು ಕಂಡು ಬಂದಿದೆ.

6. ಆದ್ದರಿಂದ, ಸಾರ್ವಜನಿಕರ ಅನುಕೂಲಕ್ಕಾಗಿ ಉತ್ತಮ ಪ್ರದೇಶದಲ್ಲಿ ಸ್ಮಶಾಣಕ್ಕೆ ಜಾಗ ಕಾಯ್ದಿರಿಸಿ, ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 10/8/17.

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.